ಸಂವೇದನಾಶೀಲ ಮನಸ್ಸು ಇದ್ದರಂತೂ ಇನ್ನಷ್ಟು ವೈವಿಧ್ಯಮಯ ಒಳನೋಟಗಳ ಜಗತ್ತು ತೆರೆದುಕೊಳ್ಳುತ್ತದೆ. ಓದು ಎಂಬುದು ನನ್ನನ್ನು ಇಡಿಯಾಗಿ ಆವರಿಸಿದ ಒಂದು ಗೀಳು. ಓದಿನ ಬಗ್ಗೆ ನನಗೆ ಅಪಾರ ಹೊಟ್ಟೆಬಾಕ ಹಸಿವು. ಒಮ್ಮೊಮ್ಮೆ ನನ್ನ ಅಗತ್ಯಕ್ಕೆ ತಕ್ಕ ಓದಿನ ವ್ಯಾಪ್ತಿಯೊಳಗಿರುತ್ತೇನೆ. ಕೆಲಮೊಮ್ಮೆ ಯಾವುದೇ ಕಟ್ಟುಪಾಡುಗಳಿಲ್ಲದ ಅಲೆಮಾರಿಯಂತಹ ಓದು. ಕೈಗೆ ಸಿಕ್ಕಿದ್ದನ್ನೆಲ್ಲಾ ಓದುತ್ತಿರುತ್ತೇನೆ. ಇನ್ನೊಮ್ಮೆ ಗ್ರಂಥಗಳ ರಾಶಿ ನನ್ನೆದುರಿಗೆ ಇದ್ದರೂ ಅವುಗಳತ್ತ ಕಣ್ಣು ಕೂಡ ಹಾಯಿಸುವುದಿಲ್ಲ. ಲಹರಿ ಬಂದಂತೆ ನನ್ನ ಓದು. ಅನುಭವದ ಬಗ್ಗೆ ಹೇಳುವುದಾದಲ್ಲಿ ಓದಿಗಿಂತಲೂ ನನಗೆ ಅನುಭವ ಪ್ರಿಯವಾದುದು. ಅನುಭವಗಳಿಗೆ ತೆರೆದುಕೊಳ್ಳುವಾಗ ಪುಟ್ಟ ಮಗುವಿನಂತಹ ಕುತೂಹಲ ನನ್ನ ಎದೆಯಲ್ಲಿ ಪುಟಿದೇಳುತ್ತಿರುತ್ತದೆ. ವೈಯುಕ್ತಿಕ ಅನುಭವಗಳ ನೋವು ನಲಿವು, ದುಃಖ ಯಾತನೆ ಹಾಗೂ ಸಾರ್ವಜನಿಕ ಬದುಕಿನ ಒಳಿತುಕೆಡಕು ಹಾಗೂ ಮುಖವಾಡಗಳು ಮತ್ತು ದ್ವಂದ್ವಗಳು ನನ್ನ ಆತ್ಮದಲ್ಲಿ ಭಾವತರಂಗಗಳನ್ನು ಹುಟ್ಟಿಸುತ್ತವೆ.

ನನ್ನದು ಅತ್ಯಂತ ಪ್ರಯೋಗಶೀಲ ಮನಸ್ಸು. ನಾನು ಕಾಲೇಜಿನಲ್ಲಿದಾಗ ನಿದ್ರೆ ಗುಳಿಗೆಗಳ ಪರಿಣಾಮವನ್ನು ಅರಿಯುವ ಸಲುವಾಗಿ ಮೂರು ನಿದ್ರೆಯ ಗುಳಿಗೆಗಳನ್ನು ಏಕಕಾಲದಲ್ಲಿ ಸೇವಿಸಿದ್ದೆ. ಅದರಿಂದ ನನ್ನ ದೇಹ ಮತ್ತು ಮನಸ್ಸಿನ ಮೇಲೆ ಆಗುತ್ತಿದ್ದ ಪರಿಣಾಮಗಳನ್ನು ಜೋರಾಗಿ ಹೇಳುತ್ತ ನಾನು ಹೇಳಿದುದ್ದೆಲ್ಲವನ್ನು ಬರೆದುಕೊಳ್ಳುವಂತೆ ತಿಳಿಸಿ ಪೆನ್ನು ಪೇಪರಿನೊಂದಿಗೆ ಸನ್ನದ್ಧಳನ್ನಾಗಿ ಮಾಡಿ ನನ್ನ ತಂಗಿಯನ್ನು ಕೂರಿಸಿಕೊಂಡಿದ್ದೆ. ಅವಳು ಬಹಳ ಪುಕ್ಕಲು ಹುಡುಗಿ. ನಾನು ಹೇಳಿದುದನ್ನು ಬಿಟ್ಟು ಬಾಕಿ ಎಲ್ಲವನ್ನು ಮಾಡಿದಳು. ಅವಳಿಗೆ ತೀರ ಅಸಹಜವಾಗಿ ಕಾಣುತ್ತಿದ್ದ ಆ ಪ್ರಸಂಗದಲ್ಲಿ ಅವಳು ಎಷ್ಟೊಂದು ಗಾಬರಿಗೊಂಡಳೆಂದರೆ ನನ್ನ ಕಣ್ಣೆವೆಗಳು ಬಲವಾಗಿ ಮುಚ್ಚಿಕೊಳ್ಳುವ ಅನುಭವ ನನಗಾಗುತ್ತಿದಂತೆಯೇ ಜೋರಾಗಿ ಬೊಬ್ಬೆ ಹೊಡೆಯ ತೊಡಗಿದಳು. 'ದೀದಿ ಸತ್ತು ಹೋದರು' ಎಂಬ ಅವಳ ಕೂಗಿಗೆ ಇಡೀ ಮನೆಯೇ ಅಲ್ಲಿ ನೆರೆಯಿತು. ಆಗ ನಾವು ಬೇಸಿಗೆ ರಜೆಯಲ್ಲಿ ಹಾಸನದಲ್ಲಿ ನನ್ನ ಅಜ್ಜನ ಅಂದರೆ ನನ್ನ ತಂದೆಯ ತಂದೆ ಮನೆಯಲ್ಲಿ ಇದ್ದೆವು. ರಜೆಗೆಂದು ಬಂದಿದ್ದ ನನ್ನ ಸೋದರತ್ತೆಯಂದಿರು ಮತ್ತಿತರ ನೆಂಟರಿಷ್ಟರು ಮೊದಲಾದವರ ನಡುವೆ ನಡೆದ ಈ ಘಟನೆಯಿಂದ ನನ್ನ ತಾಯಿಯಂತೂ ಭಯ ಮತ್ತು ನಾಚಿಕೆಯಿಂದ ಭೂಮಿಗಿಳಿದು ಹೋಗಿದ್ದರು. ನನ್ನ ತಂದೆ ಮಾತ್ರ ಅತೀವ ಚಿಂತಾಕ್ರಾಂತರಾಗಿದ್ದರು. ಆರೋಗ್ಯ ಇಲಾಖೆಯಲ್ಲಿ ಉದ್ಯೋಗದಲ್ಲಿದ್ದ ನನ್ನ ತಂದೆಯ ನೇರ ಮೇಲ್ವಿಚಾರಣೆಯಲ್ಲಿ ನಾನು ಒಂದು ಹಗಲು ಒಂದು ರಾತ್ರಿ ನಿದ್ರೆ ಮಾಡಿ ಮೇಲೆದ್ದೆ. ಆದರೆ ನನ್ನ ನೆಂಟರಿಷ್ಟರ ಅತೀವ ಕುತೂಹಲದ ಮತ್ತು ಪ್ರಶ್ನಾರ್ಹ ನೋಟಗಳಿಗೆ ಹೊಂದಿಕೊಳ್ಳುವುದು ನನಗೂ ಅಪಾರ ಕಷ್ಟವಾಯಿತು. ಆದರೆ ಬೇರೆ ರೀತಿಯ ಕತೆಯೊಂದು ಹುಟ್ಟಿಕೊಂಡಿತು. ನನ್ನ ತಂಗಿಯ ಕೈಯಲ್ಲಿದ್ದ ಪೇಪರು ಪೆನ್ನು ನಾನು ಆತ್ಮಹತ್ಯೆಯ ಪತ್ರವನ್ನು ಬರೆಯಲು ತೆಗೆದುಕೊಂಡದ್ದು ಮತ್ತು ಆತ್ಮಹತ್ಯೆಯ ಪ್ರಯತ್ನದ ಸಲುವಾಗಿ ನಾನು ಗುಳಿಗೆ ನುಂಗಿದ್ದು ಎಂಬ ಊಹಾಪೋಹದ ಲೋಕ ಸೃಷ್ಟಿಯಾಯಿತು. 'ಸಕಾಲದಲ್ಲಿ ನನ್ನ ತಂಗಿ ಗೌಹರಿ ಎಲ್ಲರನ್ನು ಎಚ್ಚರಿಸಿ ನನ್ನ ಜೀವವನ್ನು ಉಳಿಸಿದಳು' ಎಂಬ ಇಲ್ಲದ ಶ್ರೇಯಸ್ಸು ಅವಳ ಪಾಲಿನದಾಯಿತು. ಭುಗಿಲೆದ್ದ ನನ್ನ ಸೇಡನ್ನು ತಣಿಸಲು ಒಂದೆರಡು ದಿನಗಳಲ್ಲಿಯೇ ಅವಳನ್ನು ಕೂಡಿಹಾಕಿಕೊಂಡು ಬಲವಾಗಿ ಅವಳನ್ನು ಚಿವುಟಿದೆ. ಒಂದೆರಡು ದಿನಗಳ ನಂತರ ನನ್ನ ತಂದೆ ಏನಾಯಿತು ಎಂದು ನನ್ನನ್ನು ಕೇಳಿದರು. ನಿದ್ರೆ ಗುಳಿಗೆಯ ಅನುಭವ ಪಡೆಯುವ ನನ್ನ ಪ್ರಯತ್ನದ ಕಥಾನಕವನ್ನು